




ಪ್ರವಾಸಿಗರಿಂದಲೇ! ಹೀಗಾಗಿ ಆಸಕ್ತರನ್ನು ಸೆಳೆಯುವ ವಿವಿಧ ಬಗೆಯ ಜಾಹಿರಾತುಗಳನ್ನು ಪ್ರವಾಸಿಗರಿಗೆ ಕೊಡುವ ಗೈಡ್‌ನಲ್ಲಿ ಕಾಣಬಹುದು. 'ಯುವರ್ ಪ್ಲೆಷರ್ ಈಸ್ ಅವರ್ ಬಿಸ್‌ನೆಸ್', 100% ಪೀಸ್ ಗ್ಯಾರಂಟಿ, ಗಂಟೆಗೆ 120 ಯೂರೋ, ಕಡಿಮೆ ದರದ ಸಮಗ್ರ ಸೇವೆ, ನಿಮ್ಮ ಮನೆ ಅಥವಾ ಹೋಟೆಲ್‌ಗೇ ಬಂದು ಸೇವೆ, ಡಿನ್ನರ್, ಡೇಟ್ ಜೊತೆಗೆ ಪರ್ಸನಲ್ ಗೈಡ್ ಕೂಡ, ಬಾಡಿಗಾರ್ಡ್‌ಗಳ ಕಾಟವಿಲ್ಲ– ಇತ್ಯಾದಿ ಸ್ಲೋಗನ್ನುಗಳು ಜಾಹೀರಾತಿನಲ್ಲಿ ಕಾಣಿಸುತ್ತವೆ. '24 ಗಂಟೆಯೂ ಸೇವೆ ಲಭ್ಯ' ಎಂಬ ಹೇಳಿಕೆಯಿಂದ ಹಿಡಿದು 'ಕಾಲೇಜು ವೇಳೆಯಲ್ಲಿ ಕರೆ ಮಾಡಬೇಡಿ' ಎಂಬ ವಾಕ್ಯದ ಜಾಹೀರಾತುಗಳನ್ನೂ ಕಾಣಬಹುದು. 'ಗಂಡಸರಿಂದ ಗಂಡಸರಿಗಾಗಿ' ಕೂಡಾ ಜಾಹೀರಾತಿನಲ್ಲಿ ಕಾಣಿಸಿಕೊಳ್ಳುತ್ತದೆ.

ನಮ್ಮ ಕರ್ನಾಟಕದಲ್ಲೂ ಹಿಂದೆ ಹಲವು ಊರುಗಳನ್ನು 'ವೇಶ್ಯೆಯರ ಊರು' ಎಂದೇ ಭಾವಿಸಲಾಗುತ್ತಿತ್ತು. ಮೂಗೂರು ಮುಂತಾದ ಊರುಗಳಿಗೆ ಹೆಣ್ಣು ಕೊಡುವುದು, ಅಲ್ಲಿಂದ ಹೆಣ್ಣು ತರುವುದಕ್ಕೆ ಹಿಂಜರಿಯುತ್ತಿದ್ದ ಕಾಲವಿತ್ತು. ಆದರೂ ಯೂರೋಪಿನ ಇಂತಹ ಮುಕ್ತ ಹಾಗೂ ಕಾನೂನುಬದ್ಧ ವೇಶ್ಯಾವಾಟಿಕೆಯ ಕಲ್ಪನೆಯನ್ನು ಭಾರತದಂತಹ ಸಮಾಜದಲ್ಲಿ ಕಲ್ಪಿಸಿಕೊಳ್ಳುವುದು ತುಂಬ ಕಷ್ಟ.